

# ಆಶಾ ಮುಷ್ಟಿಯಲ್ಲಿ ಫಾಲ್ಕೆ ನಕ್ಷತ್ರ

■ ವಿಶಾಖ ಎನ್‌.

ಮುಂಬೈನ ಚಾಪೆಲ್ ಸ್ಟ್ರೀಟ್‌ನ ಗೋಡೆಯ ಮೇಲೆ ಕಳೆದ ವರ್ಷ ಮ್ಯೂರಲ್ ಮೂಡುತ್ತಿತ್ತು. ವಹೀದಾ ರೆಹಮಾನ್, ಹೆಲೆನ್ ಹಾಗೂ ಆಶಾ ಪಾರೇಖ್ ಮೂವರೂ ಜೀವದ ಗೆಳತಿಯರ ಸ್ನೇಹ ಸಂಭ್ರಮವೂ ಆ ಮ್ಯೂರಲ್‌ನ ಭಾಗ.

ಈ ಮೂವರೂ ಕಳೆದ ವರ್ಷವೇ ಕಪಿಲ್ ಶರ್ಮ ಶೋಗೆ ಒಟ್ಟಿಗೆ ಹೋಗಿ, ನೆನಪಿನ ಕಚಗುಳಿಯನ್ನು ಎಲ್ಲರಿಗೂ ಇಟ್ಟಿದ್ದು. ಈಗ ಈ ಮೂವರ ಪೈಕಿ ಆಶಾ ಪಾರೇಖ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯ ಗರಿ ಮೂಡಿದೆ. ಮೂವರ ಟ್ರಿಪ್ಪು ಇನ್ನು ಮತ್ತೆಲ್ಲಿಗೊ?

'ದಿಲ್ ಚಾಹ್ತಾ ಹೈ' ಹಿಂದಿ ಸಿನಿಮಾ 2001ರಲ್ಲಿ ತೆರೆಕಂಡಾಗ ಮಿಲೇನಿಯಲ್‌ಗಳ ಸ್ನೇಹಕಥನದ ಹೊಸ ಸ್ವರೂಪವೊಂದು ಅನಾವರಣಗೊಂಡಿತ್ತು. ಅಸಲಿಗೆ ಅಂತಹ ಸ್ನೇಹವನ್ನು ಅದಾಗಲೆ ವಹೀದಾ, ಹೆಲೆನ್, ಆಶಾ ದಶಕಗಳಗಟ್ಟಲೆ ಬದುಕಿ ಅಗಿತ್ತು. ಈ ಮೂವರೂ ಹೋದವರ್ಷ ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳಲ್ಲಿ ಕ್ರೂಸ್‌ನಲ್ಲಿ ಸಾಗುತ್ತಾ ಜೀವನ್ಮುಖಿ ತುಳುಕಿಸಿದ್ದರು. ಇಷ್ಟಬಂದಿದ್ದಾಗ ಹಿಂದೊಮ್ಮೆ ಇಸ್ತಾನ್‌ಬುಲ್‌ಗೂ ಪ್ರವಾಸ ಹೋಗಿಬಂದಿದ್ದರು.

ಹೆಲೆನ್, ಸಲ್ವಾರ್ ಕಮೀಜ್‌ನಲ್ಲಿ ಕಂಗೊಳಿಸುವುದು ಹೆಚ್ಚು. ವಹೀದಾ, ಆಶಾ ಸೀರೆಗಳ ಕಲೆಕ್ಷನ್ ಕಂಡರೆ ಹರೆಯದವರಿಂದ ಇಳಿ ವಯಸ್ಸಿನವರವರೆಗೆ ಎಲ್ಲರದೂ ಒಂದೇ ಉಲಿ– 'ಎಲಿಗೆಂಟ್'.

ಆಶಾ ತಂದೆ ಬಚುಬಾಯ್ ಪಾರೇಖ್ ಗುಜರಾತ್‌ನ ಹಿಂದು. ತಾಯಿ ಸಲ್ಮಾ ಆಮೇಲೆ ಸುಧಾ ಎಂದು ಹೆಸರು ಬದಲಿಸಿಕೊಂಡು ಬದುಕಿದವರು. ಮಗಳನ್ನು ತಾಯಿ ಚಿಕ್ಕಪ್ರಾಯದಲ್ಲೆ ಶಾಸ್ತ್ರೀಯ ನೃತ್ಯ ಕಲಿಯಲು ಹಚ್ಚಿದರು. ಪಂಡಿತ್ ಬನ್ಸಿಲಾಲ್ ಭಾರತಿ ತರಹದವರ ಶಿಷ್ಯತ್ವ ದೊರೆಯುವುದು ದೊಡ್ಡ ವಿಷಯವೇ ಆಗಿತ್ತು.

ಹಾಗೆ ನೃತ್ಯದ ಗೊಡವೆಯಿಂದಲೇ ವೇದಿಕೆ ಹತ್ತುವ ಯೋಗ ಒಲಿದದ್ದು. ಸಿನಿಮಾ ನಿರ್ದೇಶಕ ಬಿಮಲ್ ರಾಯ್ ಒಂದು ಪ್ರದರ್ಶನ ಕಂಡದ್ದೇ, ತಮ್ಮ 'ಮಾ' ಹಿಂದಿ ಚಲನಚಿತ್ರದಲ್ಲಿ ನಟಿಸು ಎಂದು ಬಾಲಕಿ ಆಶಾಳನ್ನೂ, ಅವಳ ಅಮ್ಮನನ್ನೂ ಒಪ್ಪಿಸಿದರು. ಆಗಿನ್ನೂ ಆಶಾ ವಯಸ್ಸು ಹತ್ತು ವರ್ಷವಷ್ಟೆ. ಬಾಲನಟಿಯಾಗಿ ಯಶಸ್ಸು ಸಂದದ್ದು ಕಡಿಮೆಯೆ. ಹೀಗಾಗಿ ಓದಿನ ಕಡೆ ಲಕ್ಷ್ಯ ನೀಡಲು ನಿರ್ಧರಿಸಿ, ಸಿನಿಮಾದಿಂದ ಬ್ರೇಕ್ ಪಡೆದುಕೊಂಡಳು ಬೇಬಿ ಆಶಾ ಪಾರೇಖ್.

ಮತ್ತೆ ಬಣ್ಣಹಚ್ಚುವ ಮನಸ್ಸಾದದ್ದು ಹದಿನಾರನೇ ವಯಸ್ಸಿನಲ್ಲಿ. ವಿಜಯ್ ಭಟ್ ಎಂಬ ನಿರ್ದೇಶಕ ನಟಿ ಅಮೀತಾಗೆ ಅವಕಾಶ ಕೊಡಲೇಬೇಕೆಂಬ ಉದ್ದೇಶದಿಂದ ಆಶಾ ಅವರನ್ನು ತಿರಸ್ಕರಿಸಿದರು. ಅದಾದ ಒಂದೇ ವಾರದಲ್ಲಿ 'ದಿಲ್ ದೇಖೆ ದೇಖೊ' ಹಿಂದಿ ಸಿನಿಮಾ ನಟನೆಯ ಅವಕಾಶ ಹುಡುಕಿಕೊಂಡು ಬಂತು. ಸಿನಿಮಾ ಬರಹಗಾರ–ನಿರ್ದೇಶಕ ನಾಸಿರ್ ಹುಸೇನ್ ನೀಡಿದ ಸುವರ್ಣಾವಕಾಶವಿದು. ಶಮ್ಮಿ ಕಪೂರ್ ನಾಯಕ. ಚಲನಚಿತ್ರ ಹಿಟ್ ಆದದ್ದಷ್ಟೆ ಅಲ್ಲ, ಆಶಾ ಎನ್ನುವ ಸ್ಟಾರ್ ಹುಟ್ಟಿದ್ದೂ ಆಯಿತು.

'ಜಬ್ ಪ್ಯಾರ್ ಕಿಸೀ ಸೆ ಹೋತಾ ಹೈ'ನಿಂದ 'ಕಾರ್‌ವಾ'ವರೆಗೆ ಆರು ಸಿನಿಮಾಗಳಲ್ಲಿ ನಾಸಿರ್, ಆಶಾಗೆ ಅವಕಾಶವಿತ್ತರು. ನಟಿಯಲ್ಲಿದ್ದ ನೃತ್ಯ ಕೌಶಲ, ಟಾಮ್ ಬಾಯಿಷ್ ಧೋರಣೆ ಹಾಗೂ ಗ್ಲಾಮರ್ ಅನ್ನೇ ಬಂಡವಾಳ ಮಾಡಿಕೊಂಡರು. ಅಭಿನಯದ ಜತೆಗೆ ವಿತರಣೆಯ ಪಟ್ಟುಗಳನ್ನು ಕೂಡ ನಾಸಿರ್ ಕಲಿಸಿಕೊಟ್ಟರು. 21 ಸಿನಿಮಾಗಳನ್ನು ಕೆಲವು ಭಾಗಗಳಲ್ಲಿ ಆಶಾ ವಿತರಣೆ ಮಾಡುವಷ್ಟು ಬೆಳೆದರು.

'ದೋ ಬದನ್', 'ಚಿರಾಗ್' ಚಲನಚಿತ್ರಗಳಲ್ಲಿ ನಟಿಯಾಗಿ ಆಶಾ ಹೊರಳುವಿಕೆಯನ್ನು ಗುರುತಿಸಬಹುದು. ಅವುಗಳ ಮಾಗಿದ ವಸ್ತುಗಳ ಕುರಿತು ಆಶಾ ಈಗಲೂ ಹೆಮ್ಮೆಯ ಮಾತುಗಳನ್ನಾಡುತ್ತಾರೆ. ಇಂತಹುದೊಂದು ತಿದ್ದುಪಡಿಯನ್ನು ವೃತ್ತಿಬದುಕಿನಲ್ಲಿ ಮಾಡಿದವರು ನಿರ್ದೇಶಕ ರಾಜ್ ಖೋಸ್ಲಾ.

ದೇವಾನಂದ್, ರಾಜ್‌ಕಪೂರ್, ಶಮ್ಮಿ ಕಪೂರ್ ಅಭಿಮಾನಿಗಳಲ್ಲಿ ಬಹುತೇಕರು ಆಶಾ ನಾಜೂಕುತನಕ್ಕೂ ಫಿದಾ ಆದವರೇ. ಒಮ್ಮೆ ಈ ನಟಿಯ ಸೆಳೆತದ ಆಳ ಅರಿತ ನಿರ್ದೇಶಕರು ಮತ್ತೆ ಮತ್ತೆ ಅವಕಾಶ ಕೊಟ್ಟವರೆ. ವಿಜಯ್ ಆನಂದ್ ಮಾಡಿದ್ದೂ ಅದನ್ನೇ.

'ಶರವೇಗದ ಸರದಾರ' ಕನ್ನಡ ಸಿನಿಮಾದಲ್ಲೂ ಆಶಾ ಅಭಿನಯಿಸಿದ್ದಾರೆ. ನಾಯಕಿಯಾಗಿ ಅಭಿನಯಿಸುವ ವಯಸ್ಸು ಮುಗಿದಮೇಲೆ ಅತ್ತಿಗೆ, ತಾಯಿಯ ಪಾತ್ರಗಳಿಗೂ ತೆರೆದುಕೊಂಡರು. 1992ರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪುರಸ್ಕಾರ ಸಂದಿತು.

ಆಶಾ ಮದುವೆಯಾಗಲೇ ಇಲ್ಲ. ನಾಸಿರ್ ಜತೆ ಅವರಿಗೆ ಪ್ರೇಮಾಂಕುರವಾಗಿತ್ತೆಂಬ ಗುಸುಗುಸು ಇತ್ತು. ಅದಾಗಲೇ ಮದುವೆಯಾಗಿದ್ದ ನಾಸಿರ್ ಪತ್ನಿಗೆ ನೋವುಂಟುಮಾಡಕೂಡದು ಎಂದು ಆಶಾ ದೂರ ಉಳಿದರು. ನಾಸಿರ್ ಮೃತಪಡುವ ಹಿಂದಿನ ದಿನ ಅವರೊಟ್ಟಿಗೆ ಆಶಾ ಮಾತನಾಡಿದ್ದರು. ಅಮೆರಿಕದ ಪ್ರೊಫೆಸರ್ ಒಬ್ಬರೊಟ್ಟಿಗೆ ಇನ್ನೇನು ಆಶಾ ಮದುವೆಯಾಗಿಯೇ ಹೋಯಿತು ಎನ್ನುವ ಸುದ್ದಿಯೂ ಹಬ್ಬಿತ್ತು. ಅಲ್ಲೂ ಆತನ ಗರ್ಲ್‌ಫ್ರೆಂಡ್ ಸಲುವಾಗಿ ಆಶಾ ತ್ಯಾಗ ಮಾಡಿದರು.

ಕರಾ ಭವನ್ ಎನ್ನುವ ನೃತ್ಯಶಾಲೆ ಹಾಗೂ ತಮ್ಮದೇ ಹೆಸರಿನ ಒಂದು ಆಸ್ಪತ್ರೆಗಳೇ ಈಗ ಆಶಾಗೆ ಎಲ್ಲ. ಒಲಿದಂತೆ ಸ್ನೇಹಿತೆಯರ ಜತೆ ಪ್ರವಾಸ ಹೊರಟು, ಎಂಬತ್ತು ವಯಸ್ಸಿನ ಸುಕ್ಕುಗಳನ್ನೆಲ್ಲ ಮೀರಿ ಅವರು ನಗುತ್ತಿರುತ್ತಾರೆ.

1998ರಿಂದ ಮೂರು ವರ್ಷ ಕೇಂದ್ರ ಸೆನ್ಸಾರ್ ಮಂಡಳಿಯ ಅಧ್ಯಕ್ಷೆ ಅವರಾಗಿದ್ದರು. ಮಹಿಳೆಯೊಬ್ಬರು ಈ ಸ್ಥಾನ ಅಲಂಕರಿಸಿದ್ದು ನಮ್ಮ ದೇಶದಲ್ಲಿ ಅದೇ ಮೊದಲು.

ಲತಾ ಮಂಗೇಷ್ಕರ್ ಸ್ವರಾಮೃತಗಳ ಕಿವಿಗಿಳಿಸಿಕೊಂಡ ಜತೆಗೇ ಆಶಾ ನಾಜೂಕು ಅಭಿನಯ ಕಣ್ತುಂಬಿಕೊಂಡವರಿಗೆ, ಅವರಿಗೆ ದಾದಾಸಾಹೇಬ್ ಫಾಲ್ಕೆ ಸಂದಿರುವುದು ಖುಷಿಯೇ ಹೌದು. ■